# ಉದ್ಯಾನ ಇಲಾಖೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

## ಸುತ್ತೋಲೆ

**ಕೆಯು/ ಉದ್ಯಾನ/2026-27** / 09 **ದಿನಾಂಕ : 2-5-2026**

ಕ.ವಿ.ವಿ ಮತ್ತು ಕೆ.ಸಿ.ಡಿ ಆವರಣದಲ್ಲಿ ವಿವಿದ ಪಸಲುಗಳನ್ನು ಇದ್ದ ಸ್ಥಿತಿಯಲ್ಲಿ ಟಂಡರ/ಬಹಿರಂಗ ಹರಾಜು ಮೂಲಕ ಮಾರಾಟ ಮಾಡಲು ಉದ್ಯಾನ ಇಲಾಖೆಯಲ್ಲಿ ಏರ್ಪಡಿಸಲಾಗಿದೆ.

| ಅ. ನಂ | ಪಸಲುಗಳ ವಿವರಣೆ | ಹರಾಜಿನಲ್ಲಿ ಭಾಗವಹಿಸಲು ಕಟ್ಟಬೇಕಾದ ಠೇವಣಿ ಹಣ | ಪಸಲು ತೆಗೆದಕೊಂಡವರು ಕಟ್ಟಬೇಕಾದ ಠೇವಣಿ ಹಣ |
|---|---|---|---|
| 1 | ಕ.ವಿ.ವಿ ಆವರಣದಲ್ಲಿಯ ಚಿಕ್ಕು-81 | 3000=00 | 1000=00 |
| 2 | ಕ.ವಿ.ವಿ ಆವರಣದ ವಿಶ್ವಚೇತನ ಕಟ್ಟಡದ ಹತ್ತಿರ + ನರ್ಸರಿಯಲ್ಲಿನ ತೆಂಗು 37+36 | 10000=00 | 1000=00 |
| 3 | ಕ.ವಿ.ವಿ ಆವರಣ ಸಸ್ಯೋದ್ಯಾನದ ತೆಂಗು-32 | 2000=00 | 500=00 |
| 4 | ಕ.ವಿ.ವಿ ಆವರಣದ ರೇಷ್ಮೆ ತೋಟ + ಚಿಕ್ಕು ತೋಟ + ಕನ್ನಡ ವಿಭಾಗ 35+9+7 | 4000=00 | 1000=00 |
| 5 | ಕರ್ನಾಟಕ ಕಾಲೇಜು ಮತ್ತು ಇತರೇ ಅಂಗ ಸಂಸ್ಥೆಗಳಲ್ಲಿರುವ ತೆಂಗು-47 | 8000=00 | 1000=00 |
| 6 | ಕೆ.ಸಿ.ಡಿ + ಅದರ ಇತರೇ ಅಂಗ ಸಂಸ್ಥೆಗಳಲ್ಲಿಯ ನುಗ್ಗೆ + ಸಂಪಿಗೆ + ಅಂಟವಾಳ 2+3+2 | 200=00 | 200=00 |

### ಟಂಡರ ಕರಾರುಗಳು

1. ಮೇಲೆ ತಿಳಿಸಿದ ಸ್ಥಳದಲ್ಲಿರುವ ಗಿಡಗಳ ಪಸಲುಗಳನ್ನು ಚನ್ನಾಗಿ ಗುರುತಿಸಿಕೊಂಡು ಇಷ್ಟವಾದಲ್ಲಿ **FINANCE OFFICER, KARNATAK UNIVERSITY, DHARWAD** ಇವರ ಹೆಸರಲ್ಲಿ ತಾವು ಸಲ್ಲಿಸಲು ಇಚ್ಛಿಸುವ ಪಸಲಿನ ಮುಂದೆ ನಮೂದಿಸಿರುವ ಹಣವನ್ನು ಭಾಗವಹಿಸಲು ಕಟ್ಟಬೇಕಾದ ಹಣದ ಡಿ.ಡಿ ಗಳನ್ನು ಪ್ರತಿ ಪಸಲಿಗೆ ಪ್ರತ್ಯೇಕವಾಗಿ ಡಿ.ಡಿ.ಯೊಂದಿಗೆ ತಮ್ಮ ಟಂಡರ ದರವನ್ನು ನಿಗದಿತ ಪಾರ್ಮನಲ್ಲಿ ಬರೆದು ಟಂಡರ ಡಬ್ಬದಲ್ಲಿ ಹಾಕಬೇಕು. ಟಂಡರ ಪಾರ್ಮನ್ನು ರೂ. 700=00 ಚಲನ್ ಕಟ್ಟಿ ಅದರ ಪೈಕಿ ರೂ. 126=00 (ಜಿ.ಎಸ್.ಟಿ) ಹಣವನ್ನು ನಗದು ರೂಪದಲ್ಲಿ ನೀಡಿದ ನಂತರ ಟಂಡರ ಪಾರ್ಮ ನೀಡಲಾಗುವದು. ಟಂಡರ ಪಾರ್ಮಿಗೆ ತುಂಬಿದ ಹಣವನ್ನು ಯಾವುದೇ ಕಾರಣಕ್ಕೆ ಮರಳಿಸುವದಿಲ್ಲಾ. ಟಂಡರನಲ್ಲಿ ಭಾಗವಹಿಸುವವರು ಕಡ್ಡಯವಾಗಿ ಟಂಡರ ಪಾರ್ಮ ಪಡೆಯಲೇಬೇಕು. ಟಂಡರದಾರರು ಕಡ್ಡಾಯವಾಗಿ ಅಧಿಕೃತ ವಿಳಾಸದ ಪುರಾವೆ ಲಗತ್ತಿಸಬೇಕು.
2. **ದಿನಾಂಕ : 14-5-2026 ರಂದು ಮದ್ಯಾಹ್ನ 3.00 ಗಂಟೆಯೊಳಗಾಗಿ** ಉದ್ಯಾನ ಇಲಾಖೆಯಲ್ಲಿರುವ ಶೀಲು ಮಾಡಿದ ಟಂಡರ ಬಾಕ್ಸನಲ್ಲಿ ಹಾಕಬೇಕು. ತದನಂತರ ಬಂದವರನ್ನು ಪರಿಗಣಿಸುವದಿಲ್ಲಾ. ಅದೇ ದಿನ ಮದ್ಯಾಹ್ನ 3.30 ಗಂಟೆಗೆ ಬಹಿರಂಗ ಹರಾಜು ಏರ್ಪಡಿಸಲಾಗುವದು. ಬಹಿರಂಗ ಹರಾಜು ಮುಗಿದ ನಂತರ ಟಂಡರ ಬಾಕ್ಸನಲ್ಲಿರುವ ಮೋಹರಾದ ಟಂಡರಗಳನ್ನು ತೆರೆದು ನೋಡಲಾಗುವದು. ಇವೆರಡರಲ್ಲಿ ಯಾರ ಬೆಲೆಯು ಹೆಚ್ಚು ಇರುವದೋ ಅವರಿಗೆ ಪಸಲು ಹರಾಜು ಸಮೀತಿ ಸದಸ್ಯರಿಗೆ ಹಾಗೂ ಮೇಲಾಧಿಕಾರಿಗಳಿಗೆ ಒಪ್ಪಿಗೆಯಾದಲ್ಲಿ ಮಾತ್ರ ಪಸಲುಗಳನ್ನು ನೀಡಲಾಗುವದು.
3. ಟಂಡರ/ಬಹಿರಂಗ ಹರಾಜಿನಲ್ಲಿ ಹೆಚ್ಚಿನ ಬೆಲೆಗೆ ಪಸಲು ಪಡೆದವರು ಪಸಲು ಹಾರುಜು ಸಮೀತಿ ಸದಸ್ಯರು ಒಪ್ಪಿಗೆ ನೀಡಿದಲ್ಲಿ ಪಸಲು ಮೊತ್ತದಲ್ಲಿ ಠೇವಣಿ ಹಣ ವಜಾಗೊಳಿಸಿ ಉಳಿದ ಹಣದ 75% ಹಣವನ್ನು ಮರುದಿನ ಬ್ಯಾಂಕಿನ ಅವಧಿಯೊಳಗೆ ತುಂಬಬೇಕು. ಒಂದು ವೇಳೆ ತಾವು ಹಣವನ್ನು ತುಂಬದಿದ್ದಲ್ಲಿ ತಾವು ತುಂಬಿದ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಂಡು ಅದೇ ವೇಳೆಯಲ್ಲಿ ತಾವು ಕೊಂಡ ಪಸಲುಗಳನ್ನು ಎರಡನೇ ಹೆಚ್ಚಿನ ಬೇಡಿಕೆದಾರಾರಿಗೆ ನೀಡಬಹುದಾಗಿದೆ.
4. ಟಂಡರ ದರಗಳು ಮೇಲಾಧಿಕಾರಿಗಳಿಂದ ಒಪ್ಪಿಗೆ ಪಡೆದ ನಂತರ ಇನ್ನೋಳಿದ ಹಣವನ್ನು ತುಂಬಲು ತಿಳಿಸಲಾಗುವದು. ನಿಗದಿತ ಸಮಯಾದಲ್ಲಿ ಹಣವನ್ನು ತುಂಬದಿದ್ದಲ್ಲಿ ತಾವು ತುಂಬಿದ ಠೇವಣಿ ಹಣ ಮತ್ತು 75% ತುಂಬಿದ ಹಣವನ್ನು ಮುಟ್ಟುಗೋಲು ಹಾಕಿಕೊಳಲಾಗುವದು. ಮೇಲ್ಕಂಡ ಪಸಲುಗಳಿಗೆ ಯೋಗ್ಯ ಬೆಲೆ ಬಾರದಿದ್ದರೆ ಟಂಡರ/ಬಹಿರಂಗ ಹಾರಾಜು ದರವನ್ನು ಸ್ವೀಕರಿಸುವ ಅಥವಾ ನಿರಾಕರಿಸುವ ಹಕ್ಕನ್ನು ಮೇಲಾಧಿಕಾರಿಗಳಿಗೆ ಕಾಯ್ದಿರಿಸಿದೆ.
5. ಟಂಡರನ್ನಲ್ಲಿ ಭಾಗವಹಿಸಿ ಹಚ್ಚಿಗೆ ಬೇಡಿಕ ಸಲ್ಲಿಸಿ ಪಸಲಿನ ಹಣವನ್ನು ಸಂಪೂರ್ಣವಾಗಿ ತುಂಬಿ ಪಸಲು ತೆಗೆದುಕೊಂಡುಹೋಗುವ ಅನುಮತಿ ಪಡೆದ ನಂತರವೂ ಪಸಲು ವಿಲೇವಾರಿಗೆ ಏನಾದರು ಸಮಸ್ಯಗಳು ಬಂದಲ್ಲಿ ಮೇಲಾಧಿಕಾರಿಗಳು ಸದರ ವಿಷಯಕ್ಕೆ ಸಂಬಂದಿಸಿದಂತೆ ತೆಗೆದಕೊಳ್ಳುವ ನಿರ್ಣಯವೇ ಅಂತಿಮ. ಅದಕ್ಕೆ ತಂಟೆ ತಕರಾರುಗಳನ್ನು ಪರಿಗಣಿಸುವದಿಲ್ಲಾ.
6. ಪಸಲುಗಳನ್ನು ತೆಗೆಯುವಾಗ ಏನಾದರು ಅನಾಹುತ ಸಂಬಿವಿಸಿದಲ್ಲಿ ವಿಶ್ವವಿದ್ಯಾಲಯವು ಜವಾಬ್ದಾರವಲ್ಲಾ. ಏನಾದರು ವಿಶ್ವವಿದ್ಯಾಲಯಕ್ಕೆ ಹಾನಿಯಾದಲ್ಲಿ ವಿಶ್ವವಿದ್ಯಾಲಯದ ಆಡಳಿತಾಧಿಕಾರಿಗಳು ತಗೆದಕೊಳ್ಳುವ ನಿರ್ಣಯಾವೇ ಅಂತಿಮ. ಪಸಲುಗಳನ್ನು ತೆಗೆದುಕೊಂಡವರು ಪಸಲಿನ ಔಷದ ಉಪಚಾರ, ನೀರು ಹಾಕುವದು, ಗಿಡಗಳ ಸಂರಕ್ಷಣೆ ಮತ್ತು ಇತ್ಯಾದಿಗಳನ್ನು ಪಸಲು ತೆಗೆದುಕೊಂಡವರು ತಮ್ಮ ಸ್ವಂತ ಖರ್ಚಿನಿಂದ ತಾವೇ ಮಾಡಿಕೊಳ್ಳಬೇಕು. ಪಸಲು ತೆಗೆದುಕೊಂಡವರು ಪಸಲನ್ನು ಅಂದರೆ ಕಾಯಿಗಳನ್ನು ಮತ್ತು ಹಣ್ಣುಗಳನ್ನು ಮಾತ್ರ ಕಟಾವು ಮಾಡಿಕೊಳ್ಳಬೇಕು. ಮತ್ತು ಗಿಡಗಳ ತೋಟದ ಪಕ್ಕದಲ್ಲಿರುವ ಯಾವುದೇ ಗಿಡಗಳನ್ನು ಮುಟ್ಟುತಕ್ಕದಲ್ಲಾ. ಪಸಲುಗಳಿಂದ ಲಾಭವಾಗಲಿ ಅಥವಾ ಹಾನಿಯಾಗಲಿ ಅದಕ್ಕೆ ವಿಶ್ವವಿದ್ಯಾಲಯವು ಜಬ್ದಾರವಾಗಿರುವದಿಲ್ಲಾ. ವಿಶ್ವವಿದ್ಯಾಲಯದ ಅನುಮತಿ ಆದೇಶ ಪಡೆಯದೇ ಪಸಲು ಕಟಾವು ಮಾಡುವಂತಿಲ್ಲಾ.
7. ಟಂಡರ ನಡೆಯುವಾಗ ಶಾಂತತೆ ಕಾಪಾಡದಿದ್ದರೆ ಮತ್ತು ಏನಾದರೂ ತೊಂದರೆಯಾದಲ್ಲಿ ಟಂಡರನ್ನು ರದ್ದುಗೊಳಿಸಲಾಗುವದು. ಹೆಚ್ಚಿನ ಮಾಹಿತಿಗಾಗಿ ಉದ್ಯಾನ ಇಲಾಖೆ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ದಲ್ಲಿ ಕಚೇರಿ ವೇಳೆಯಲ್ಲಿ ವಿಚಾರಿಸಬಹುದು. ಮೊ. ನಂ. 8762270302

2/5/26

ಕುಲಸಚಿವರು

Scanned with OKEN Scanner